ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಎಲ್ಲಾ ಮರಗಳನ್ನು ಒಂದೇ ವರ್ಷ ಕಡಿದರೆ ಕಾಫಿ ವ್ಯವಸಾಯಕ್ಕೆ ತೊಂದರೆಯಾಗುವುದರಿಂದ ವರ್ಷ ವರ್ಷಕ್ಕೂ 5-10 ಎಕರೆಯಂತೆ ಆಜ್ಞೆಯನ್ನು ಜಾರಿಗೆ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಮಲೆನಾಡಿನವರು, ತಮಗೆ ಮಲೆನಾಡಿನ ಅನುಭವವಿದೆ. ತಾವು ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳು ಸಲಹೆ ಕೊಡುವುದನ್ನೇ ನಾವು ಮಾನ್ಯತೆ ಕೊಡುವುದಕ್ಕೆ ಸಿದ್ಧರಿದ್ದೇವೆ. ಸ್ಥಳದಲ್ಲಿರುವವರು ತಮಗೆ ವಿಷಯ ಚೆನ್ನಾಗಿ ಗೊತ್ತಿದೆ. ಬೇಕಾದರೆ ಮಲೆನಾಡಿನಿಂದ ಬಂದಿರುವ ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳ ಮೀಟಿಂಗ್ ಮಾಡಿ, ತಮ್ಮ ಅನುಭವ, ಸಲಹೆಗಳನ್ನು ಕೇಳಿ, ತಾವು ಕಾನೂನು ತಿದ್ದುಪಡಿ ಮಾಡಬೇಕೆಂದು ನಿರ್ಣಯಿಸಿದರೆ, ನಾನು ಸಿದ್ಧನಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಮರಗಳನ್ನು ಕಡಿಯ ಬೇಕಾದಂಥ ಸಂಧರ್ಭಗಳು ಎನ್ನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಪ್ರಶ್ನೆ ಕೇಳಿದರೆ, ವಿವರಗಳನ್ನು ಕೊಡುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ.—ಇದರಲ್ಲ ಬರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ.

———

Constitution of a Committee for preparing Text Books for Primary, Middle and High Schools in the State.

*Q—.209. Sri E. NARAYANA GOWDA (Bangarpet).—

Will the Government be pleased to state :—

(*a*) when the Committee for the purpose of preparing text books for Primary, Middle and High Schools in the State was constituted by the Education Dapartment and the names of the members of the Committee ;

(*b*) whether they have prescribed different text books for each District in the State and if so, the reasons for the same ;

(*c*) the names of the books that have not been published so far and the reasons therefor ?

A.—Sri S. R. KANTHI (Minister for Education).—

(*a*) The member probably means the committees for prescribing Text Books and not committee for preparing Text Books. The committees for prescribing Taxt Books were constituted on 18th March 1960.

The names of the members of the two committees are as follows :—

I. TEXT BOOK COMMITTEE FOR PRIMARY AND BASIC SCHOOLS.

1. Director of Public Instruction in Mysore, Bangalore—*Chairman.*
2. Sri T. Vasudevaiah, Joint Director of Public Instruction.
3. Sri G. P. Shivaram, Joint Director of Public Instruction.
4. Deputy Director of Public Instruction, Education Research Bureau, Bangalore—*Secretary.*
5. Sri B. Mariraj, Deputy Director of public Instruction, Bangalore Division, Bangalore

(SRI S. R. KANTHI)

6. Sri Vittal Shenoy, District Educational Officer, South Kanara, Mangalore.
7. District Educational Officer, Gulbarga.
8. The Superintendent, Basic Training Centre, Vidyanagar, Bangalore District.
9. The Principal, S.S. Training College, Lachyan, Bijapur District.
10. The Principal, Marathi Training College, Vadagoan, Belgaum.
11. The Superintendent, Secondary Grade Teachers' Basic Training School, Gulbarga.
12. The Inspector of Schools, Mercara, Coorg.
13. The Inspectress of Schools, Civil Station, Bangalore.
14. Sri R. Krishnaiah, Head Master, Government Primary School, Advalli, Hassan Town.
15. Smt. D. Kaveramma, Head Mistress, Senior Basic School, Kushalanagar, Coorg.
16. Sri B. V. Banumaiah, M.L.C., Mysore
17. Smt. Vijaya Raghavendra Rao, M.Sc., M.L.A., Gulbarga.

II. TEXT BOOK COMMITTEE FOR SECONDARY SCHOOLS.

1. The Director of Public Instruction in Mysore, Bangalore—*(Chairman)*.
2. Dr. V. K. Javali, Joint Director of Public Instruction in Mysore, Bangalore.
3. The Vice-Chancellor of the Mysore University, Mysore, or Representative nominated by the Syndicate.
4. The Vice-Chancellor, Karnatak University, Dharwar or Representative nominated by the Syndicate.
5. The Director of Technical Education in Mysore, Bangalore.
6. The Deputy Director of Public Instruction, State Educational Research Bureau, Bangalore. *(Secretary)*
7. The Principal, University Teachers' College, Mysore.
8. Sri S. V. Jevoor, Deputy Director, Educational and Vocational Guidance, Bangalore.
9. Sri Basheer Ahmed, Deputy Director of Public Instruction.
10. Dr. S. C. Nandimath, M.L.C., Bagalkot.
11. Sri T. A. Pai, Minipal, South Kanara.
12. Sri M. T. Sreekantaiah, M.L.C., Doddaballapur.
13. Sri S. M. Hunshal, Head Master, Hamard High School, Raichur.
14. Smt. Ponnaiah, Subject Inspector, Office of the Deputy Director of Public Instruction, Bangalore Division, Bangalore.
15. Sri H. V. Srirangaraju, Deputy Director of Public Instruction, Mysore Division, Mysore.

(*b*) Yes. For the prescription of Text Books, the whole State has been divided into several zones, each zone consisting of one or more districts as the case may be and books are prescribed on this basis. The main reasons for zonal prescription are the following :—

1. As the number of candidates studying in the State is very large, it is not possible for a single publisher to release in time the books prescribed for the whole State.

2. It is extremely difficult, if not impossible, for a single publisher or author to make available the books in several lakhs in all places of the State.

3. A large number of books are received for consideration. Many of them are suitable for prescription and it is extremely difficult to select one among them as being outstanding merit and best suited. So many suitable books have to be prescribed.

4. After integration of States, there is the difficulty of language spoken in different areas. If books written in a particular area are prescribed for that area for some time, the language difficulty is easily solved. This can be done only by dividing the State into Zones.

(*c*) The books in respect of the following subjects have not been prescribed so far :—

Standard	*Subject*		*Medium*
VIII.	Social Studies ...	... Hindi	Medium.
	General Science ...	... Telugu	,,
		... Urdu	,,
		... Hindi	,,
	General Mathematics ..	... Hindi	,,
IX.	Social Studies ...	... Urdu	,,
		... Tamil	,,
		... Hindi	,,
	General Science ...	... Urdu	,,
		... Tamil	,,
		... Hindi	,,
	General Mathematics ...	... Urdu	,,
		... Tamil	,,
		... Hindi	,,
	Opt. Politics and Civics	... English	,,
	Opt. Carpentry-Turning	... Kannada	,,
	Opt. Civil Draughtsmanship	... do	,,
	Opt. Electric Wiring and Servicing	... do	,,
	Music (Hindustani)	... Eng., Kannada	Medium
	Dance (Bharathanatyam and Kathakali)	do	,,

(SRI. S. R. KANTHI)

Standard	*Subject*		*Medium*
X.	Social Studies	...	Urdu Medium
		...	Tamil ,,
		...	Hindi ,,
	General Science	...	Urdu ,,
		...	Tamil ,,
		...	Hindi ,,
	General Mathematics	...	Urdu ,,
		...	Tamil ,,
		...	Hindi ,,
	Music 1. Hindustani 2. Western Music	...	English and Kannada Medium.
	Dance : Bharathanatyam and Kathakali		do ,,
	Sculpture		do ,,

Text Books for Primary Schools.

III.	Social Studies : Urdu Medium		...	For Mandya, Bidar, Raichur, Gulbarga, Coorg and Bijapur.
V.	General Mathematics	...	...	Hindi Medium
VI.	do	...	...	...
III.	General Science	...	...	Gujarathi Medium
IV.	do	...	...	do
III.	Social Studies	...	...	Telugu Medium.
III.	do	...	...	Gujarathi Medium.
III.	do	...	...	Malayalam Medium.
III.	do	...	...	do
IV.	do	...	...	do
V.	Home Science	...	...	Tamil Medium.
VI.	do	...	...	do
VII.	do	...	...	do
V.	do	...	...	Telugu Medium.
VI.	do	...	...	do
VII.	do	...	...	do
VII.	do	...	...	Hindi Medium.
VII.	Music.	...	...	

No Text Books for above subjects are forthcoming in spite of repeated notifications, as the pupils taking these subjects are very few in number and the publishers are not interested in preparing and submitting books for a small number of pupils.

ಶ್ರೀ ಇ. ನಾರಾಯಣಗೌಡ.—ಈ ಕಮಿಟಿಗೆ ಎಷ್ಟು ವರ್ಷಗಳ ಅವಧಿ ಇದೆ?

†ಶ್ರೀ ಎಸ್. ಆರ್. ಕಂಠಿ.—ಮೂರು ವರ್ಷ.

† Indicates that the remarks or speeches have not been revised by the member concerned.

ಶ್ರೀ ಇ. ನಾರಾಯಣಗೌಡ.—ಪಠ್ಯ ಪುಸ್ತಕಗಳನ್ನು ಗೊತ್ತುಮಾಡುವುದಕ್ಕೋಸ್ಕರ ರಾಜ್ಯವನ್ನು ಕೆಲವು ಕ್ಷೇತ್ರಗಳಾಗಿ ವಿಂಗಡಿಸಿದ್ದೀರಿ. ಸಾಧಾರಣವಾಗಿ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವರ್ಗವಾದ ಕೆಲವು ಅಧಿಕಾರಿಗಳ ಮಕ್ಕಳಿಗೆ ಬೇರೆ ಪಠ್ಯ ಪುಸ್ತಕಗಳಿದ್ದು, ತೊಂದರೆಯಾಗುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇದರಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ಈ ಪಠ್ಯ ಪುಸ್ತಕಗಳಲ್ಲರುವ ಪಾಠ ಬೇರೆ ಇದ್ದು ತೊಂದರೆ ಯಾಗುತ್ತದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಕೆಲಮಟ್ಟಿಗೆ ತೊಂದರೆಯಾಗುತ್ತದೆ.. ಆದರೆ ಪಠ್ಯ ಪುಸ್ತಕಗಳಲ್ಲಿ ಅದೇ ಪಾಠವಿರುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಕೆಲವು ಸಬ್‌ಜೆಕ್ಟಗಳಲ್ಲಿ text book ಗಳನ್ನು prescribe ಮಾಡದಿರುವುದಕ್ಕೆ ಕಾರಣಗಳನ್ನು ಕೊಟ್ಟಿದ್ದೀರಿ. ಸರ್ಕಾರದವರೇ ಒಂದು ಲೈಬ್ರರಿ ವರ್ಕ್‌ಶಾಪ್ ಮಾಡಿದರೆ, ಪುಸ್ತಕಗಳನ್ನು publish ಮಾಡುವುದಕ್ಕೆ ಅಡ್ಡಿ ಏನಿದೆ ?

ಶ್ರೀ ಎಸ್. ಆರ್. ಕಂಠಿ.—ಟೆಕ್ಸ್ಟ್ ಬುಕ್ಕುಗಳನ್ನು ನಾಮಿನಲೈಸ್ ಮಾಡುವ ಒಂದು ಸ್ಕೀಮ್ ಇದೆ ; ಅದರಂತೆ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಪ್ರೈಮರಿ ಸ್ಕೂಲ್ ಕಮಿಟಿಯಲ್ಲಿ ಪುಸ್ತಕಗಳನ್ನು ಬರೆಸುವವರು ಯಾರು, ಬರೆದಮೇಲೆ ಸ್ಕ್ರುಟಿನಿ ಮಾಡುವವರು ಯಾರು ?

ಶ್ರೀ ಎಸ್. ಆರ್. ಕಂಠಿ.—ಈ Text Book Commitees ಗಳು ಎರಡು ತರಹ ಇವೆ. ತಾವು Primary and Basic School, ಕಮಿಟಿ ವಿಚಾರವಾಗಿ ಕೇಳುತ್ತಾ ಇದ್ದೀರೆಂದು ತಿಳಿದುಕೊಂಡಿದ್ದೇನೆ. ಯಾವ ಕ್ಲಾಸಿಗೆ ಯಾವ ಸಬ್ ಜೆಕ್ಟಿನಲ್ಲಿ ಟೆಕ್ಸ್ಟ್‌ಬುಕ್ ಬರೆದಿದ್ದಾರೆಂದು ನೋಡಿ, ಬೇರೆ ಬೇರೆ ಸಬ್‌ಜೆಕ್ಟುಗಳಿದ್ದನ್ನು ಬೇರೆ ಬೇರೆಯವರಿಗೆ ಸ್ಕ್ರುಟಿನಿಗೆ ಕಳುಹಿಸುತ್ತಾರೆ ; ಅವರಿಂದ ರಿಪ್ಪೋರ್ಟ್ ತರಿಸಿಕೊಳ್ಳುತ್ತಾರೆ. ಯಾವುದು ಯೋಗ್ಯ ಅಂತ ಕಂಡರೆ ಅದನ್ನು text-book ಆಗಿ prescribe ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಮಿಟಿಯವರು ಪ್ರೈಮರಿ ಸ್ಕೂಲುಗಳಲ್ಲಿ ಕೆಲವು ಶಾಲೆಗಳಿಗೆ ಪುಸ್ತಕ ಪ್ರಿಸ್ಕ್ರೈಬ್ ಮಾಡುತ್ತಾರೆ. ಅವುಗಳಲ್ಲಿ ತಪ್ಪುಗಳಿದ್ದರೆ ಆವಾಗ ಕಮಿಟಿಯವರು ಏನು ಕೆಲಸ ಮಾಡುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಅದು ಸ್ಕ್ರುಟಿನಿಯಾಗಿ ಬರುತ್ತದೆ. ಕೆಲವರಿಗೆ ಕಳುಹಿಸಿರುತ್ತೇವೆ, ಅವರಿಂದ ರಿವ್ಯು ಆಗಿಬರುತ್ತದೆ. ಹಾಗೆ ಬಂದಮೇಲೆ ಪಠ್ಯ ಪುಸ್ತಕವಾಗಿ prescribe ಮಾಡುತ್ತೇವೆ. ಯಾವ ಪುಸ್ತಕದಲ್ಲಿಯೂ ಪ್ರಿಸ್ಕ್ರೈಬ್ ಮಾಡಿ ಪ್ರಿಂಟಿಗೆ ಕೊಡುವಾಗ ತಪ್ಪು ಇರುವುದಿಲ್ಲ. 2-3-4 ನೇ ಸಾರಿ ಪ್ರಿಂಟ್ ಆದಮೇಲೆ ರೋಪಡೋಶಗಳು ಬರುತ್ತವೆ.

Sri S. SIVAPPA.—May I know the policy of the Government in prescribing several text books for the same class in one State ?

ಶ್ರೀ ಎಸ್. ಆರ್. ಕಂಠಿ.—ಇಡೀ ಸ್ಟೇಟನ್ನು ಒಂದೇ ಒಂದು ಜೋನ್ ಮಾಡಿ ಪಠ್ಯ ಪುಸ್ತಕಗಳನ್ನು ಪಬ್ಲಿಷರಿಗೆ ಕೊಟ್ಟರೆ, ಅವರಿಗೆ ನೀಗಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಏಕೆಂದರೆ ಹೈನ್ಯೂಲು ಸ್ಟೇಜಿಗೆ 2½, 3 ಲಕ್ಷ ಪುಸ್ತಕಗಳು ಬೇಕು, ಪ್ರೈಮರಿ ಸ್ಟೇಜಿಗೆ 25-30 ಲಕ್ಷ ಟೆಕ್ಸ್ಟ್ ಪುಸ್ತಕಗಳು ಬೇಕು. ಆದ್ದರಿಂದ ಜೋನ್ ಮಾಡಿ, ಆಯಾಯ ಭಾಗದಲ್ಲಿ ಬೇರೆ ಬೇರೆ ಪಬ್ಲಿಷರಿಗೆ ಕೊಟ್ಟು ಸಾವಿರಾರು ಪುಸ್ತಕಗಳು ಬರುವಹಾಗೆ ಮಾಡುವುದರಿಂದ ಅನುಕೂಲವಾಗುತ್ತದೆ. ಈಗ ಏನಾಗಿದೆಯೆಂದರೆ ಈ ಪುಸ್ತಕಗಳು ಸರಿಯಾಗಿ ಸಿಕ್ಕುವುದಿಲ್ಲ ಎಂಬ ಒಂದು ಕೂಗು ಇದೆ. ಅಂತಹುದರಲ್ಲಿ ಎಂಟೈರ್ ಸ್ಟೇಟನ್ನು ಒಂದು ಜೋನ್ ಮಾಡಿದರೆ ಪುಸ್ತಕ ಸಿಗುವುದೇ ಬಹಳ ಕಷ್ಟವಾಗುತ್ತದೆ. ಅದಕ್ಕೇ ಟೆಕ್ಸ್ಟ್ ಬುಕ್ಕುಗಳನ್ನು ನ್ಯಾಷನಲೈಸ್ ಮಾಡುವ ಕ್ರಮ ತೆಗೆದುಕೊಂಡು 107 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಈ ಪಠ್ಯ ಪುಸ್ತಕಗಳನ್ನು ಗೊತ್ತುಮಾಡತಕ್ಕ ಸಮಿತಿಗಳೇ ಅಲ್ಲದೆ, ಪಠ್ಯ ಪುಸ್ತಕಗಳನ್ನು ತಯಾರಿಸುವುದಕ್ಕೂ ಕೂಡ ಕಮಿಟಿಗಳು ನೇಮಕವಾಗಿದ್ದು ತನ್ಮೂಲಕ ಕೆಲವು ಪುಸ್ತಕಗಳನ್ನು ತಯಾರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಬರುವುದಿಲ್ಲ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಟೆಕ್ಸ್ಟ್ ಬುಕ್ ಕಮಿಟಿಗಳೇ ಅಲ್ಲದೆ ನಮ್ಮಲ್ಲಿ Education Department ನಲ್ಲಿ Education Research Bureau ಅಂತ ಇದೆ. ಅವರು ರಿಸರ್ಚ್ ಮಾಡಿ ಅನೇಕ ಪುಸ್ತಕಗಳನ್ನು ಬರೆಯುತ್ತಾರಲ್ಲವೇ ?

ಶ್ರೀ ಎಸ್. ಆರ್. ಕಂಠಿ. ಒಂದು ಸಬ್‌ಜೆಕ್ಟಿಗೆ, ಒಂದು ಸ್ಯ್ಲಾಂಡರ್ಡಿಗೆ ಕಮಿಟಿಯನ್ನು ಮಾಡಿದ್ದಾರೆ. ಆಮೇಲೆ ಎಡಿಟೋರಿಯಲ್ ಕಮಿಟಿಗಳು ಇರುತ್ತವೆ. ಬರೆದಮೇಲೆ ರಿಸರ್ಚ್ ಬ್ಯೂರೊನವರು ನೋಡುತ್ತಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಪಠ್ಯ ಪುಸ್ತಕಗಳನ್ನು ರಾಜ್ಯದ ಎಜುಕೇಷನ್ ಇಲಾಖೆ ಮುಖಾಂತರ ಪ್ರಿಂಟ್ ಮಾಡಿಸಬಹುದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅವರು ಪ್ರಿಂಟ್ ಮಾಡುವ ಕೆಲಸ ಮಾಡುವುದಿಲ್ಲ. ಅವರು ಪುಸ್ತಕಗಳನ್ನು ಬರೆಯುವ ತಯಾರು ಮಾಡುವ ಕೆಲಸ ಮಾಡುತ್ತಾರೆ.

ಶ್ರೀ ಇ. ನಾರಾಯಣಗೌಡ.—ಅಲ್ಪಸಂಖ್ಯಾ ವಿದ್ಯಾರ್ಥಿಗಳಿಗಾಗಿ ಬೇಕಾಗಿರುವ ಪುಸ್ತಕಗಳನ್ನು ತಯಾರು ಮಾಡಲಕ್ಕೆ ಯಾರಿಗೂ ಆಸಕ್ತಿ ಇಲ್ಲದಿರುವುದರಿಂದ, ಅಲ್ಪಸಂಖ್ಯಾ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮುಂದುವರಿಯ ಬಾರದೆಂದು ತಮ್ಮ ಅಭಿಪ್ರಾಯವೇನು ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಅಲ್ಲ. ಈ ಪುಸ್ತಕಗಳು ಬೇಕೆಂದು ಅನೇಕ ಸಲ ನೋಟಿಫಿಕೇಷನ್ನುಗಳನ್ನು ಮಾಡಿದ್ದೇವೆ ; ಯಾರೂ ಮುಂದೆ ಬರುವುದಿಲ್ಲ ; ಬಹಳ ಕಡಿಮೆ ವಿದ್ಯಾರ್ಥಿಗಳಿರುತ್ತಾರೆ. ಅದಕ್ಕೇ ಪಬ್ಲಿಷರುಗಳು ಬರುವುದಿಲ್ಲ. ಆದರೂ ಪುಸ್ತಕಗಳು ಇಲ್ಲ ಅಂತ ಅರ್ಥವಲ್ಲ. ಬೇರೆ ಕಡೆ ಪುಸ್ತಕಗಳನ್ನು ತಯಾರಿಸಿದ್ದರೆ, ಅವುಗಳನ್ನು ಕೊಡುತ್ತೇವೆ.

Sri SANJEEVANATHA AIKALA.—Has it come to the notice of the Government that large scale corruption is prevalent in the selection of these text-books ?

ಶ್ರೀ ಎಸ್. ಆರ್. ಕಂಠಿ.—ಅದು ನಮ್ಮ ಮುಂದೆ ಬಂದಿಲ್ಲ. ಸರ್ಕಾರದವರು ಹೆಚ್ಚು ಹೆಚ್ಚು ರೀತಿಯ ಪುಸ್ತಕಗಳನ್ನು ನ್ಯಾಷನಲೈಸ್ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಶಿವಪ್ಪ.—ಮೈನೂರಿನಲ್ಲಿ ಅನೇಕ ತರಹ ಟೆಕ್ಸ್ಟ್ ಬುಕ್ಕುಗಳು ಒಂದು ತರಗತಿಗೆ ಇರುವುದರಿಂದ, ಒಂದೇ ತರಹ, ಒಂದೇ ವಿಧವಾದ ಸ್ಯ್ಲಾಂಡರ್ಡ್ ಪುಸ್ತಕಗಳಿಲ್ಲದಿರುವುದರಿಂದ, ಗೊಂದಲಕ್ಕೆ ಅವಕಾಶ ಕೊಟ್ಟರೆ. ಆದ್ದರಿಂದ ಇಡೀ ರಾಜ್ಯದಲ್ಲಿ ಒಂದು ಕ್ಲಾಸಿಗೆ ಒಂದೇ ತರಹ ಪಠ್ಯ ಪುಸ್ತಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಬೇರೆ ಬೇರೆ ಪುಸ್ತಕಗಳು ಒಂದೇ ಕ್ಲಾಸಿಗೆ ಇರುವುದರಿಂದ ಗೊಂದಲವಾಗಿದೆ ಅಂತ ಹೇಳುತ್ತಾರೆ ; ಹಾಗೆ ಏನೂ ಇಲ್ಲ. ಯಾವುದೇ ಒಂದು ಪುಸ್ತಕವಾಗಲಿ, ಈಗ ಜನರಲ್ ಸೈನ್ಸ್ ತೆಗೆದುಕೊಂಡರೆ, ಒಂದು ಕಡೆಗೆ ಒಬ್ಬರು ಬರೆದದ್ದು ಇಟ್ಟಿದ್ದರೆ, ಮತ್ತೊಂದು ಕಡೆಗೆ ಮತ್ತೊಬ್ಬರು ಬರೆದಿದ್ದನ್ನು ಇಟ್ಟಿದ್ದಾರೆ. But subject matter is the same. ಆದರಲ್ಲಿ subject matter ಹೆಚ್ಚು ಕಡಿಮೆ ಆಗುವುದಿಲ್ಲ ; ಗೊಂದಲ ಆಗುವುದಿಲ್ಲ. ನಾವು ಸರ್ಕಾರದವರು ಒಂದೊಂದು ಪುಸ್ತಕವನ್ನೂ ನೋಡಿದ್ದೇವೆ ಮತ್ತು ನ್ಯಾಷನಲೈಸ್ ಮಾಡುತ್ತಾ ಇದ್ದೇವೆ. ಮುಂದಿನ ನಾಲ್ಕು ವರ್ಷಗಳಲ್ಲಿ 500 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಬೇಕೆಂದು ಇದ್ದೇವೆ. Secondary ಮತ್ತು Primary ಸ್ಕೂಲುಗಳನ್ನು ಸೇರಿಸಿ 1,250 ಪುಸ್ತಕಗಳನ್ನು ಗೊತ್ತು ಮಾಡಿದ್ದೇವೆ. ಕೆಲವು ಮೈನರ್ ಪುಸ್ತಕಗಳೂ ಇವೆ ; ಮೇಜರ್ ಪುಸ್ತಕಗಳನ್ನು ಮುಂದಿನ ಐದು ವರ್ಷಗಳಲ್ಲಿ ನಾವು ನ್ಯಾಷನಲೈಸ್ ಮಾಡಬೇಕೆಂದಿದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಪಠ್ಯ ಪುಸ್ತಕ ಸಮಿತಿಗಳಲ್ಲಿ ಸದಸ್ಯರಾಗಿರುವವರ ಮೇಲೆ ಬಹಳ ದೂರುಗಳು ಬರುತ್ತಿವೆ ; ಅವರುಗಳು ನೂರಾರು ಕಮಿಟಿಗಳಲ್ಲಿರುವುದರಿಂದ ಅವರುಗಳಿಗೆ ಪುರಸತ್ತೇ ಇರುವುದಿಲ್ಲ. ಅಂಥವರು ಸಮಿತಿ ಮೀಟಿಂಗಿಗೆ ಬರದೆ ಇರುವುದರಿಂದ ತೊಂದರೆ ಯಾಗುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಒದಗಿಸಿರುವ information ಓದಿದರೆ ಗೊತ್ತಾಗುತ್ತದೆ ಈ ಎರಡು ಕಮಿಟಿಗಳಲ್ಲಿ, ನಾನ್-ಆಫೀಷಿಯಲ್‌ಗಳು 2-3 ಜನ ಇದ್ದಾರೆ. ಉಳಿದವರೆಲ್ಲಾ ಆಫೀಸರುಗಳಿದ್ದಾರೆ. ಆದ್ದರಿಂದ ತೊಂದರೆಯಾಗುವುದಕ್ಕೆ ಕಾರಣ ಇಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಫೀಸರುಗಳೇ ಜಾಸ್ತಿ ಇದ್ದರೂ, ಅವರು ನೂರಾರು ಕಮಿಟಿಯಲ್ಲಿರುವುದರಿಂದ, ಮೀಟಿಂಗಿಗೆ ಬರುವುದಕ್ಕೆ ಅವರಿಗೆ ಕಷ್ಟ.

ಶ್ರೀ ಎಸ್. ಆರ್. ಕಂಠಿ.—ಇವರಲ್ಲಿ ಕೆಲವರು ಕಮಿಟಿ ಮೀಟಿಂಗುಗಳಿಗೆ ಹೋಗದಿದ್ದರೆ ಕೆಲಸ ನಿಲ್ಲುವುದಿಲ್ಲ. ಕೋರಮ್ ಆಗುತ್ತದೆ. ಮೊದಲನೆ ಕಮಿಟಿಯಲ್ಲಿ 17 ಜನ ಇದ್ದಾರೆ ; ಎರಡನೆ ಕಮಿಟಿಯಲ್ಲಿ 15 ಜನ ಇದ್ದಾರೆ. ಏನೂ ಕಷ್ಟವಿಲ್ಲ.

ಶ್ರೀಮತಿ ಬನವರಾಜೇಶ್ವರಿ.—ಹಿಂದೆ ಒಂದು ಸಾರಿ ಹೈದರಾಬಾದ್ ಕರ್ಣಾಟಕದಲ್ಲಿ ಈ ಪಠ್ಯ ಪುಸ್ತಕಗಳ ಅಧ್ಯಾಪನದ ಕಾಲಕ್ಕೆ ಸರಿಯಾದ ವೇಳೆಯಲ್ಲಿ ಅವನ್ನು ಓದಿಸಿಲಿಕ್ಕಾಗದೇ ಇದ್ದುದರಿಂದ ಗುಲ್ಬರ್ಗ ಡಿವಿಜನ್ನಿನಲ್ಲಿ ಒಂದು ಗೌರ್ನ್‌ಮೆಂಟ್ ಪ್ಲೀಡರ್‌ನ್ನು ನ್ಯಾಮಿಸಿ ನಿಯಮಿಸಲ್ಪಟ್ಟ ಪಠ್ಯಪುಸ್ತಕ

ಗಳನ್ನು ಪ್ರಿಂಟ್ ಮಾಡಿಸಿದರು. ಅದರಂತೆಯೇ ನೀವು ಖಚಿತಕ್ಕೆ ಮಾಡಬಾರದು? ಖಾಸಗೀ ಖುವರಿಗಾದರೂ ಆ ಆರ್ಡರನ್ನು ಕೊಡಬಹುದಾಗಿತ್ತಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಎರಡು ಭಾಗ. ಒಂದು ಪ್ರಿಸ್ಕ್ರಿಪ್ಷನ್ ಮಾಡಿದ ಪುಸ್ತಕ, ಇನ್ನೊಂದು ಡಿಪಾರ್ಟ್‌ಮೆಂಟರ್ ಪುಸ್ತಕ ಎಂದು ಇವೆ. ಅವುಗಳನ್ನು ಸರ್ಕಾರದವರು ವೇಳೆಗೆ ಸರಿಯಾಗಿ ಪಾಠಶಾಲೆಗಳಿಗೆ ಹಂಚಬೇಕು. ಆದರೆ ಪ್ರಿಸ್ಕ್ರಿಪ್ಷನ್ ಪುಸ್ತಕದಲ್ಲಿ ಸ್ವಲ್ಪ ಗೊಂದಲ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಯಾರ್ಯಾರಿಗೆ ಕೊಟ್ಟಿರುತ್ತಾರೆ, ಯಾವ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕು. ಆದರೆ ಇಂಥಾದ್ದಾರಲ್ಲಿಯೇ ಪ್ರಿಂಟ್ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಗುಲ್ಬರ್ಗದಲ್ಲಿ ಮತ್ತೊಂದು ಪ್ರಿಟಿಂಗ್ ಪ್ರೆಸ್ ಆಗಿದೆ. ಆದರೆ ಇಲ್ಲಿ ಸಾಕಷ್ಟು ಸರ್ಕಾರೀ ಕೆಲಸವಿರುವುದರಿಂದ ಅಲ್ಲಿ ಸ್ವಲ್ಪಮಟ್ಟಿಗೆ ಟೆಕ್ಸ್ಟ್ ಬುಕ್ಸ್ ಕೆಲಸ ಮಾಡುವುದಕ್ಕಾಗಿ ಆಗುತ್ತದೆಂದು ನನಗನ್ನಿಸುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೆಕ್ಸ್ಟ್ ಬುಕ್ ಕಮಿಟಿಯವರೇನೋ ರಿವ್ಯೂ ಮಾಡುತ್ತಾರೆ. ನಮಾಜಶಾಸ್ತ್ರ ಬಾಗ III ರಲ್ಲಿ ವ್ಯಾಸಂಗ ಕ್ರಮ ಹೇಗಿದೆಯೆಂದರೆ ''ಪಾಠಗಳು ಎನ್ನುವ ಕಡೆ ಪುಟಗಳೆಂತಲೂ 'ಪ' ಎಂಬುದು ಹರಿದು ಹೋಗಿ 'ಷ' ಎಂಬ ಅಕ್ಷರ ಪ್ರಿಂಟ್ ಆಗಿದೆ'. ಕರಡಿ ಎಂಬುವ ಕಡೆ 'ಕೆರಡಿ' 'ಎಂಬ ಪದ ಬಿದ್ದಿದೆ. ರಿವ್ಯೂ ಕಮಿಟಿಯವರು ಪರಿಶೀಲನೆ ಮಾಡಿದ ಮೇಲೂ 'ಪ' ಅಕ್ಷರಕ್ಕೆ 'ಷ' ಎಂದು ಬಿದ್ದಿದೆ. ಈ ರೀತಿ ಆಚ್ಚಾದರೆ, ಅಂತಹ ಪುಸ್ತಕಗಳನ್ನು ನಮ್ಮ ಮಕ್ಕಳು ಓದಿದರೆ ಅವರ ತಿಳುವಳಿಕೆ ಮಟ್ಟ ಏನಾಗುತ್ತದೆ, ಅದರ ಪರಿಣಾಮವೇನಾಗುತ್ತದೆ? ಅಂದಮೇಲೆ ಈ ರೀತಿ ತಪ್ಪನ್ನು ಮಾಡಿದವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

Mr. SPEAKER.—Is the Hon'ble member giving an illustration from reality?

Sri C. J. MUCKANNAPPA.—One of my friends has written a letter to the Minister to look into the matter.

Mr. SPEAKER.—So the instance he has cited, is supported.

ಶ್ರೀ ಎಸ್. ಆರ್ ಕಂಠಿ.—ನಾನು ಆಗಲೇ ಹೇಳಿದೆ. ಯಾವುದೇ ಒಂದು ಟೆಕ್ಸ್ಟ್ ಬುಕ್ಕನ್ನು ಪ್ರಿಸ್ಕ್ರಿಪ್ಷನ್ ಮಾಡುವ ಮುಂಚೆ ಎಲ್ಲಾ ವಿವರಗಳನ್ನು ನೋಡುತ್ತೇವೆ. That is the First Edition. ನಿಜವಾಗಿ ಒಂದೆರಡು ರೋಪದೋಷಗಳೇ ಇರಬಹುದು. They are all printers' devils. fool-proof ಮಾಡುವುದಕ್ಕಾಗುವುದಿಲ್ಲ. ಸರ್ಕಾರಿ ಪ್ರಿಂಟಿಂಗುಗಳಲ್ಲಿ ಒಂದುವೇಳೆ ತಪ್ಪಾದರೆ ಅಂತಹವರಿಂದ ಎಕ್ಸ್‌ಪ್ಲನೇಷನ್ನನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ವಕ್ಕಣ್ಣಪ್ಪ.—ಒಂದುಸಾರಿ ತಪ್ಪಾದಮೇಲೆ ಅದನ್ನು ಪುನಃ ಪ್ರಿಂಟ್ ಮಾಡಿಸಬೇಕಾದರೆ ಬಹಳ ಕಷ್ಟ ಮತ್ತು ಅದರಿಂದ ಹೆಚ್ಚು ಖರ್ಚು ಆಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಒಂದುಸಾರಿ ಪ್ರಿಂಟ್ ಆದಮೇಲೆ ಅದನ್ನು ಪುನಃ ಪ್ರಿಂಟ್ ಮಾಡಿಸುವುದು ಸ್ವಲ್ಪ ಕಷ್ಟ. ಈಗಾಗಲೇ ಅದಕ್ಕೆ ಹೆಚ್ಚು ಖರ್ಚು ಆಗಿರುವಾಗ ಪುನಃ ಪ್ರಿಂಟ್ ಮಾಡಿಸುವ ಅವಶ್ಯಕತೆ ಇಲ್ಲ. ಅಲ್ಲಿ ಮಾತ್ರ ಮತ್ತೆ ಅಂಟಿಸಿ ಸರಿಮಾಡಬೇಕಾಗಿದೆ. ಅದು ಪ್ರಿಂಟರ್ಸ್ ಡೆವಿಲ್ ಆಗಿದೆ. ಆ ರೀತಿ ಅವರ ಗಮನಕ್ಕೆ ಈಗಾಗಲೇ ತಂದಿದ್ದೇವೆ. In the first edition, there was no mistake ಮೊದಲನೆಯ ಎಡಿಷನ್ ಅವರ ಗಮನಕ್ಕೆ ಬರುತ್ತದೆ. 2-3-4ನೇವು ಅವರ ಗಮನಕ್ಕೆ ಸಾಮಾನ್ಯವಾಗಿ ಬರುವುದಿಲ್ಲ. In the second edition it has crept in. After the first edition was over, ಒಂದು ವೇಳೆ ಹೆಚ್ಚು ಕಾಪಿಗಳು ಬೇಕಾದಾಗ ಪುನಃ ಪ್ರಿಂಟ್ ಮಾಡಿಸುತ್ತೇವೆ.

Sri SANJEEVANATH AIKALA.—Is it not a fact that a commission agency rocket is existing in the matter of selecting text book committees and criterion for selection is only the capacity of the publisher to pay the highest amount of commission to some of the commission agencies?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಏನು ಬಹಳ ತಿಳಿದುಕೊಂಡಿದ್ದಾರೋ ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಇ. ನಾರಾಯಣಗೌಡ.—ಶಾಲೆಗಳು ಪ್ರಾರಂಭವಾಗಿ ಎಷ್ಟೋ ದಿವಸಗಳಾದರೂ ಅನೇಕ ಮಕ್ಕಳಿಗೆ ಪಠ್ಯಪುಸ್ತಕಗಳು ದೊರೆಯದೆ ತೊಂದರೆಯಾಗಿ ವಿದ್ಯಾಭ್ಯಾಸಕ್ಕೆ ಅಡಚಣೆಯಾಗುತ್ತಿದೆ. ಆದ್ದರಿಂದ ಇನ್ನು ಮುಂದಾದರೂ ಶಾಲೆಗಳ ಪ್ರಾರಂಭದಲ್ಲಿಯೇ ಎಲ್ಲಾ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ಒದಗಿಸುವಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೋಸ್ಕರವೇ ಮೇಲಿಂದ ಮೇಲೆ ಪುಸ್ತಕಗಳನ್ನು ಬದಲಾವಣೆ ಮಾಡದೆ ಇನ್ನು ಮೂರು ವರ್ಷದವರೆಗೂ ಹಿಂದಿನ ಪುಸ್ತಕಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಈ ವರ್ಷ ಹೊಸ ಪಠ್ಯ ಪುಸ್ತಕಗಳನ್ನು ಹೊಸದಾಗಿ ಪ್ರಿಸ್ಕ್ರೈಬ್ ಮಾಡದೆ ಹಳೆಯ ಪುಸ್ತಕಗಳನ್ನೇ ಕಂಟಿನ್ಯೂ ಮಾಡುತ್ತಿದ್ದೇವೆ. ಅದರಿಂದ ಏನೂ ಗೊಂದಲವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸಾರ್ವಜನಿಕ ಮುಖಂಡರನ್ನು ಕಮಿಟಿಗಳಿಗೆ ಹಾಕುವಾಗ ಕಮಿಟಿಯವರ ದಾಕ್ಷಿಣ್ಯಕ್ಕೊಳಗಾಗಿ ಪಠ್ಯಪುಸ್ತಕಗಳನ್ನು ಕೊಡಬಾರದು ಎಂಬುದಾಗಿ ಕಾನೂನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸಾರ್ವಜನಿಕ ಮುಖಂಡರಮೇಲೆ ಸಂಶಯ ಪಟ್ಟರೆ ಅವರಿಂದ ಇಲ್ಲದ ನಲ್ಲದ ಆರೋಪಣೆಗಳು ಬರುತ್ತವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕೆಲವರು ನೂರಾರು ಕಮಿಟಿಗಳಲ್ಲಿದ್ದಾರೆಂಬುದು ಸರ್ಕಾರಕ್ಕೆ ಗೊತ್ತೇ ?

ಶ್ರೀ ಎಸ್. ಆರ್. ಕಂಠಿ.—ಬಹಳ ಕಮಿಟಿಗಳಲ್ಲಿ ಇರುವವರನ್ನು ಈ ಕಮಿಟಿಗೆ ಹಾಕಬೇಡಿ ಎನ್ನುವ ವಿಚಾರವನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳಲ್ಲಿರತಕ್ಕ ಕನ್ನಡ ಶಬ್ದಗಳನ್ನು ಓದಿದರೂ ಸರಿಯಾಗಿ ಅರ್ಥವಾಗುತ್ತಿಲ್ಲವೆಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಅಂಥಾದ್ದು ಯಾವುದಾದರೂ ಇದ್ದರೆ, ಮಾನ್ಯ ಸದಸ್ಯರು ಕೂಡಲೇ ನನಗೆ ತಿಳಿಸಲು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಲ್ಲದೆ ನಮ್ಮ ರಾಜ್ಯ ಭಾಷೆ ಕನ್ನಡವಾದರೂ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಿಂದ ಕನ್ನಡ ಶಬ್ದಗಳನ್ನು ಪ್ರಯೋಗ ಮಾಡುವುದರಿಂದ ಕೆಲವು ಕಡೆ ಆ ರೀತಿ ವ್ಯತ್ಯಾಸಗಳಾಗುತ್ತವೆ. ಹಳೆಯ ಮೈಸೂರಿನ ಪುಸ್ತಕಗಳು ಸೌತ್ ಕೆನರಾದವರಿಗೆ ಆಗುವುದಿಲ್ಲ. ಸೌತ್-ಕೆನರಾದವರದು ಇಲ್ಲಿ ಆಗುವುದಿಲ್ಲ. ಇಂಥಾದ್ದನ್ನು ಈಗ ಸರಿ ಮಾಡಬೇಕಾಗಿದೆ. ಇದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿದ್ದರೂ ಆ ಶಬ್ದಗಳು ಎಲ್ಲರಿಗೂ ಗೊತ್ತಾಗುತ್ತಿಲ್ಲ. ಆ ದೃಷ್ಟಿಯಿಂದ ಕೆಲವು ಶಬ್ದಗಳನ್ನು ಬೇಕೆಂತಲೇ ಸೇರಿಸಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇದರಿಂದ ಕನ್ನಡ ಭಾಷೆ ಹಾಳಾಗಿ ಹೋಗಿ ಬೆರಿಕೆ ಕನ್ನಡ ಭಾಷೆಯಾಗುತ್ತದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಯಾವತ್ತೂ ಕನ್ನಡ ಭಾಷೆ ಪರಿಶುದ್ಧವಾದ ಭಾಷೆ. ಅದು ಸುಪ್ರಸಿದ್ಧ ಭಾಷೆಯಾಗಿಯೇ ಉಳಿಯುತ್ತದೆ.

ಶ್ರೀ ಟಿ. ಜಿ. ನಂಜುಂಡಯ್ಯ.—ಈಗ್ಗೆ ಐದಾರು ತಿಂಗಳುಗಳು ಕಳೆದರೂ ಮೈಸೂರಿನ ಭಾಷೆಗಳ ಪುಸ್ತಕಗಳು ಬರುವ ಅವಕಾಶವೇ ಇಲ್ಲ. ಈಗಲಾದರೂ ಅವನ್ನು ತರಿಸಲು ಅನುಕೂಲ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮೈಸೂರಿನ ಭಾಷೆಯಲ್ಲಿ ಸ್ವಲ್ಪ ತೊಂದರೆ ಇದೆ. ಪಟ್ಟಿ ಕೊಟ್ಟಿದ್ದಾರೆ. ಇದರಲ್ಲಿ ಯಾರಿಗೆ ಪುಸ್ತಕ ಬರೆಯುವುದಕ್ಕೆ ಸಾಧ್ಯವಿಲ್ಲವೋ ಅಂತಹವರಿಗೆ ಸರ್ಕಾರದವರು ಎಷ್ಟೆಷ್ಟು ರೀತಿಯಿಂದ ಅನುಕೂಲವನ್ನು ಕಲ್ಪಿಸಿ ಕೊಡಬೇಕೋ ಅಷ್ಟು ರೀತಿಯಿಂದ ಕೊಡುತ್ತಿದ್ದೇವೆ

Choice in the matter of choosing the Medium of Instruction while entering the High Schools.

*Q.—279. GANJI VEERAPPA (Harihar).—

Will the Government be pleased to state.—

(*a*) whether it is a fact that the students entering the High Schools have no free choice in the matter of choosing the medium of instruction;